ಶ್ರೀ ಕೆ. ಮಲ್ಲಪ್ಪ.—ಶೇಕಡ ಇಷ್ಟು ಎಂದು ಕೇಳುವ ಪ್ರಶ್ನೆ ಉದ್ಭವಿಸುವದಿಲ್ಲ. ಕಂಪನಿಯ ಮೆಮೋರಾಂಡಂಪ್ರಕಾರ ಬೋರ್ಡ್ ಆಫ್ ಡೈರೆಕ್ಟರ್ಸ ಮುಂದೆ ಈ ಪ್ರಶ್ನೆ ಇರುತ್ತದೆ. ನಾವು ಅವರಿಗೆ request ಮಾಡಿಕೊಳ್ಳಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಮ್ಮ ರಿಕ್ವೆಸ್ಟ್‌ನಿಂದ ಪರಿಣಾಮವಾಗಿದೆಯೆ?

ಶ್ರೀ ಕೆ. ಮಲ್ಲಪ್ಪ.—ನೇರವಾಗಿ ಅವರಿಗೆ ತಿಳಿಸಲು ಸಾಧ್ಯವಿಲ್ಲ. ನಮ್ಮ ಡೈರೆಕ್ಟರ ಮುಖಾಂತರ ಪ್ರಭಾವ ತಂದಿದ್ದೇವೆ. We can only influence through our Directors.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮ್ಯಾನೇಜಿಂಗ್ ಡೈರೆಕ್ಟರ್ ಬಗ್ಗೆ ಖರ್ಚು ಆಗತಕ್ಕ ಹಣ ಎಷ್ಟು?

ಶ್ರೀ ಕೆ. ಮಲ್ಲಪ್ಪ.—ಆ ವಿವರ ಇಲ್ಲ.

ಶ್ರೀ ಜೆ. ಮಾದೇಗೌಡ.—ಕಂಪನಿ ರಿಜಿಸ್ಟರ್ ಆದ ನಂತರ ಏನಾದರೂ ಡಿವಿಡೆಂಡ್ ಬಂದಿದೆಯೆ? ಬಾರದೇ ಇದ್ದರೆ ಕಂಪನಿ ನರಿಯಾಗಿ ನಡೆಯುತ್ತಿದೆಯೆ? ಕಂಪನಿಯಲ್ಲಿ ಹಾಕಿದ ನಮ್ಮ ಹಣ ಭದ್ರವಾಗಿದೆಯೆ?

Mr. SPEAKER.—It was answered that the factory began to function only recently. The year is not out and devidend cannot be calculated.

Agents for the Distribution of Cement in Gadag Area.

*Q.—314. Sri SIDDAIAH KASHIMATH (Shirahatti).—

Will the Government be pleased to state :—

(*a*) the number of agents that are there at Gadag to distribute the cement and their area of operation ;

(*b*) whether they are aware of the fact that the distributors of cement at Gadag are selling it mostly in the black market ;

(*c*) whether they are aware of the hardships caused to the poor persons because of their inability to secure cement for constructing houses due to the shortage ?

*A.— Sri K. MALLAPPA (Minister for Industries and Commerce).—

(*a*) 9. The area of operation includes Gadag Town and Gadag Taluk.

(*b*) No.

(*c*) Yes. That is why the permit system has been introduced.

Sri SIDDAIAH KASHIMATH.—May I know the names of the Agents?

† Sri K. MALLAPPA.—The names of the concerned Agents is not with me.

ಶ್ರೀ ಸಿದ್ದಯ್ಯ ಕಾಶೀಮಠ.—(*b*) ಉತ್ತರದಲ್ಲಿ ಬ್ಲಾಕ್ ಮಾರ್ಕೆಟ್ ಮಾಡುವುದು ಗೊತ್ತಿಲ್ಲ ಎಂದು ಹೇಳಿದ್ದೀರಿ. ಈ ಸೀಮೆಂಟ್ ಏಜೆಂಟರು ಬ್ಲಾಕ್ ಮಾರ್ಕೆಟ್ ಮಾಡುತ್ತಾರೆಂದು ಸಾರ್ವಜನಿಕರಿಂದ ಅರ್ಜಿಗಳು ಬಂದಿವೆಯೆ?

ಶ್ರೀ ಕೆ. ಮಲ್ಲಪ್ಪ.—ನನಗೆ ಏನೂ ಕಂಪ್ಲೇಂಟ್ಸ್ ಬಂದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಪರ್ಮಿಟ್ ಕೊಡುವ ಅಧಿಕಾರಿಗಳು ಯಾರು?

ಶ್ರೀ ಕೆ. ಮಲ್ಲಪ್ಪ.—ಡೆಪ್ಯುಟಿಕಮಿಷನರು, ಡಿಸ್ಟ್ರಿಕ್ಟ್ ಲೆವಲ್ಲಿನಲ್ಲಿ, ತಹಸೀಲ್‌ದಾರರು ತಾಲ್ಲೂಕು ಲೆವಲ್ಲಿನಲ್ಲಿ ಕೊಡುತ್ತಾರೆ.

Sri SANJEEVANATH AIKALA.—Is it a fact that some people get cement from all the three sources ?

Mr. SPEAKER.—If they are entitled to it, why should they not get it? Is the Member suggesting that they are falsely representing and getting permits ?

Sri SANJEEVANATH AIKALA.—Yes, Sir.

Sri K. MALLAPPA.—According to the rules, they cannot get from all the sources. They can get only from one source.

Sri SANJEEVANATH AIKALA.—There are instances where for the same purpose, they got from all the 3 sources?

Mr. SPEAKER.—The hon'ble Member may kindly give it and the Minister will make an enquiry.

ಶ್ರೀ ಬಿ. ಚನ್ನಬೈರೇಗೌಡ.—ಈ permit system introduce ಮಾಡುವುದಕ್ಕೆ ಮುಂಚೆ, ಮೂಜೆಗೆ ಒಂದು ರೂಪಾಯಿ ಜಾಸ್ತಿ ಇದ್ದುದು introduce ಮಾಡಿದಮೇಲೆ ಏಳು ರೂಪಾಯಿ ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಮಲ್ಲಪ್ಪ.—ಕಂಟ್ರೋಲ್ ಇಂಟ್ರೊಡ್ಯೂಸ್ ಮಾಡುವುದಕ್ಕೆ ಮುಂಚೆ ಸಾಧಾರಣವಾಗಿ 5–6 ರೂಪಾಯಿ ಹೆಚ್ಚು ಕೊಟ್ಟು ಕೊಂಡುಕೊಳ್ಳುತ್ತಿದ್ದುದು ಎಲ್ಲರ ಅನುಭವಕ್ಕೂ ಬಂದಿದೆ. ಕಂಟ್ರೋಲ್ ಬಂದಮೇಲೆ ಆ ರೀತಿಯ ಬ್ಲಾಕ್-ಮಾರ್ಕೆಟ್ ಆಗುತ್ತಾ ಇಲ್ಲ ಎಂದು ಅನೇಕರು ಹೇಳಿದ್ದಾರೆ.

Sri C. J. MUCKANNAPPA.—Out of the 9 agents, how many are Co-operative Societies?

Sri K. MALLAPPA.—I have not got the information.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕಂಟ್ರೋಲ್ ಮಾಡುವುದಕ್ಕೆ ಮುಂಚೆ ಏಜಂಟುಗಳ ಹತ್ತಿರ ವಿರುವ ಸಿಮೆಂಟ್ ಸ್ಟಾಕ್ ಚೆಕ್ ಮಾಡಿದ್ದಿರಾ?

ಶ್ರೀ ಕೆ. ಮಲ್ಲಪ್ಪ.—ಚೆಕ್ ಮಾಡಿಲ್ಲ. ಅವರುಸ್ಟಾಕ್ ಡಿಕ್ಲೇರ್ ಮಾಡಿಕೊಳ್ಳಬೇಕು. ಯಾರು ಲೈಸೆನ್ಸಿಲ್ಲದೆ ಇಟ್ಟುಕೊಂಡಿರುತ್ತಾರೆಯೋ, ಸ್ಟಾಕ್ ಡಿಕ್ಲೇರ್ ಮಾಡಿಕೊಂಡಿರುವುದಿಲ್ಲವೊ, ಅಂಥ ವರನ್ನು ಸರ್ಕಾರ ಪ್ರಾಸಿಕ್ಯೂಟ್ ಮಾಡುತ್ತದೆ.

ಶ್ರೀ ಇ. ನಾರಾಯಣಗೌಡ.—ಈ ಖಾನಗಿ ಏಜನ್ಸೀಸ್ ತೆಗೆದು ಬಿಟ್ಟು ಸಹಕಾರ ಸಂಘಗಳಿಗೆ ಲೈಸೆನ್ಸ್ ಕೊಡುವ ಪದ್ಧತಿ ಏಕೆ ಮಾಡಬಾರದು?

ಶ್ರೀ ಕೆ. ಮಲ್ಲಪ್ಪ.—ಯಾವ ಏಜಂಟುಗಳಿಗೆ ಲೈಸೆನ್ಸ್ ಕೊಡಬೇಕೆಂದು ನಿರ್ಧರಿಸುವವರು ಸರ್ಕಾರದವರಲ್ಲ. ಯಾರು ತಯಾರಿಸುತ್ತಾರೆಯೋ ಅವರು S. T. C. ಅನುಮತಿ ತೆಗೆದುಕೊಂಡು ಏಜಂಟುಗಳನ್ನು ಅಪಾಯಿಂಟ್ ಮಾಡುತ್ತಾರೆ. ಲೈಸೆನ್ಸ್ ಕೊಡತಕ್ಕಂಥಾದ್ದು ಅವರು ಅಪಾಯಿಂಟ್ ಮಾಡಿರುವ ಏಜಂಟರುಗಳಿಗೆ.

ಶ್ರೀ ಎಸ್. ಎಂ. ಕೃಷ್ಣ.—ನಮ್ಮ ರಾಜ್ಯದಲ್ಲಿ ಸಿಮೆಂಟ್ ಅಭಾವ ಬಂದಿರತಕ್ಕಂಥಾದ್ದು, ಕೇಂದ್ರ ಸರ್ಕಾರದವರು ನಮಗೆ ಕೊಡತಕ್ಕಂಥ ಕೋಟ ಕಟ್ ಮಾಡುವುದರಿಂದ ಅಲ್ಲವೇ?

ಶ್ರೀ ಕೆ. ಮಲ್ಲಪ್ಪ.—ಈ ತುರ್ತು ಪರಿಸ್ಥಿತಿ ಬಂದನಂತರ ಏರ್ಲಾಸ್ಟ್ರೇಟುಗಳಿಗೂ ಕೊಡತಕ್ಕಂಥ ಕೋಟಾದಲ್ಲಿ 25 ಪರ್ಸೆಂಟ್ ಕಟ್ ಮಾಡಿದ್ದಾರೆ. ನಮಗೆ ಸಾಧಾರಣವಾಗಿ ಬಂದು ಕ್ವಾರ್ಟರಿಗೆ ಸಿಗುವಂಥ 62 ಸಾವಿರ ಟನ್ ಸಿಮೆಂಟಿನಲ್ಲಿ, 25 ಪರ್ಸೆಂಟ್ ಕಟ್ ಮಾಡಿ, 46 ಸಾವಿರ ಟನ್ ಸಿಗುತ್ತಾ ಇದೆ.

ಶ್ರೀಮತಿ ಸುಶೀಲಾ ಬಾಯ್ ಹಿರಾಚಂದ್ ಪಾ.—ಸಿಮೆಂಟು ವ್ಯಾಪಾರಿಗಳಿರುತ್ತಾರೆ, ಅವರಿಗೆ ಡೆಪ್ಯುಟಿ ಕಮಿಷನರು ಇಷ್ಟು ಕೋಟ ಕೊಡುತ್ತಾರೆ, ಈ ಡೀಲರುಗಳು ಹಂಚುವಾಗ 100 ಚೀಲ ಬೇಕಾದರೆ, 25 ಚೀಲ ಕೊಡುತ್ತಾರೆ. ಕೋಟ ಉಳಿದಮೇಲೆ, 75 ಚೀಲವನ್ನ ಕಳ್ಳ ಮಾರ್ಕೆಟ್ಟಿನಲ್ಲಿ ಜಾಸ್ತಿ ಧಾರಣೆಗೆ ಬೇರೆ ಬೇರೆ ಕಡೆ ಮಾರುತ್ತಾರೆ. ಇದಕ್ಕೆ ಏನು ಹೇಳುತ್ತೀರಾ?

ಶ್ರೀ ಕೆ. ಮಲ್ಲಪ್ಪ.—ಮನಸ್ಸಿಗೆ ಬಂದಂತೆ ಮಾರಾಟ ಮಾಡುವುದಕ್ಕಾಗುವುದಿಲ್ಲ. ಡೆಪ್ಯುಟಿ ಕಮಿಷನರು ಮತ್ತು ತಹಸೀಲ್‌ದಾರ್ ಕಡೆಯಿಂದ ಬಂದ ಪರ್ಮಿಟ್ ಮೇಲೆ ಮಾರಾಟ ಮಾಡಬೇಕೇ ಹೊರತು, ಮನಸ್ಸಿಗೆ ಬಂದಂತೆ ಮಾರುವ ಹಾಗಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ಪರ್ಮಿಟ್ ಸಿಸ್ಟಮ್ಮಿನಿಂದ ರೈತರಿಗೆ ಕಷ್ಟವಾಗುತ್ತಿದೆಂಬ ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಮಲ್ಲಪ್ಪ.—ರೈತರಿಗೆ ಉಪಕಾರ ಮಾಡಿದ್ದೇವೆ. ಇಲ್ಲದೆ ಹೋದರೆ ಬ್ಲಾಕ್ ಮಾರ್ಕೆಟ್ಟು ಆಗುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ಸಿಮೆಂಟ್ ಕಂಟ್ರೋಲಿನಿಂದ ನೀರಾವರಿ ಕೆಲಸಗಳಿಗೆ ಧಕ್ಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಮಲ್ಲಪ್ಪ.—Minor irrigation works ಗೆ ಸ್ವಲ್ಪಮಟ್ಟಿಗೆ ತೊಂದರೆಯಾಗಿರ ಬಹುದು. ಪಿ. ಡಬ್ಲ್ಯೂ. ಡಿ. ಮತ್ತು ಸಾರ್ವಜನಿಕ ಕೆಲಸಗಳಿಗೆ ತೊಂದರೆ ಬರದ ರೀತಿಯಲ್ಲಿ, ಅವುಗಳಿಗೆ ಬೇಕಾದಷ್ಟು ಸಿಮೆಂಟ್ ಕೊಡತಕ್ಕ ಏರ್ಪಾಡು ಮಾಡಿದೆ.

ಶ್ರೀ ಟಿ. ಕೆ. ಕಂಬ್ಳಿ.—ತಾಲ್ಲೂಕು ತಹಸೀಲ್‌ದಾರರು ಮತ್ತು ಜಿಲ್ಲಾ ಡೆಪ್ಯುಟಿ ಕಮಿಷನರು ಪರವಾನೆ ಕೊಡುತ್ತಾರೆಂದು ಹೇಳಿದಿರಿ. ತಾಲ್ಲೂಕಿನಲ್ಲಿ ತಹಸೀಲ್‌ದಾರರು ಬೇಡಿದಷ್ಟು ಕೊಟ್ಟ ಮೇಲೆ, ಡೆಪ್ಯುಟಿ ಕಮಿಷನರು ಮಾಡುವುದು ಏನು ?

ಶ್ರೀ ಕೆ. ಮಲ್ಲಪ್ಪ.—ಸಾಮಾನ್ಯವಾಗಿ ಚಿಲ್ಲರೆ ಐದು-ಹತ್ತು ಮೂಟೆ ಇದ್ದರೆ ತಹಸೀಲ್‌ದಾರರು ಕೊಡುತ್ತಾರೆ. ದೊಡ್ಡ ಪ್ರಮಾಣದಲ್ಲಿ ಬೇಕಾದರೆ ಡೆಪ್ಯುಟಿ ಕಮಿಷನರ ಹತ್ತಿರ ಹೋಗ ಬೇಕಾಗುತ್ತದೆ.

ಶ್ರೀ ಪಿ. ಎಂ. ದೇವ್.—ಸಿಮೆಂಟನ್ನು ಕೊಡುವಾಗ ಯಾವ ಬೇಸಿಸ್ ಮೇಲೆ ಮನೆ ಕಟ್ಟುವುದಕ್ಕೆ ಮುಂತಾದುದಕ್ಕೆ ಕೊಡುತ್ತೀರ ?

ಶ್ರೀ ಕೆ. ಮಲ್ಲಪ್ಪ.—ಯಾರು ಯಾರು ಅರ್ಜಿ ಕೊಡುತ್ತಾರೆಯೋ ಅವರು ಯಾವ ಉದ್ದೇಶಕ್ಕೆ ಕೊಟ್ಟಿದ್ದಾರೆಯೋ ಮನೆ ಕಟ್ಟುವುದಕ್ಕೇ, ರಿಪೇರಿಗೆ, ಆಯಾ ಅವಶ್ಯಕತೆಯನ್ನು ಅನುಸರಿಸಿ ಸಿಮೆಂಟ್ ಹಂಚತಕ್ಕಂಥ ಏರ್ಪಾಡಾಗಿದೆ.

ಶ್ರೀ ಜೆ. ದೇವಯ್ಯ.—ಸಿಮೆಂಟ್ ಹಂಚುವ ಏರ್ಪಾಡು, ಟೌನಿನಲ್ಲಿ, ತಾಲ್ಲೂಕು ಸ್ಥಳದಲ್ಲಿರುವುದರಿಂದ, ಗ್ರಾಮೀಣಜನರಿಗೆ ತ್ರಾಸು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಗ್ರಾಮೀಣಜನರಿಗೆ ತೊಂದರೆಯಾಗಬಹುದೆಂದೇ, ತಹಸೀಲ್‌ದಾರರಿಗೆ ಅಧಿಕಾರ ಕೊಟ್ಟಿದೆ.

ಶ್ರೀ ಜೆ. ದೇವಯ್ಯ.—ಸೊಸೈಟಿಗೆ ಏಕೆ ಕೊಡಬಾರದು ?

ಶ್ರೀ ಕೆ. ಮಲ್ಲಪ್ಪ.—ನಾನು ಆಗಲೇ ಹೇಳಿದ ಹಾಗೆ ಎಜಂಟರುಗಳನ್ನು, ಪ್ರಡ್ಯೂಸರುಗಳು, S. T. C. ಅನುಮತಿ ತೆಗೆದುಕೊಂಡು, ನೇಮಕ ಮಾಡುತ್ತಾರೆ. ಆದ್ದರಿಂದ ನಾವು ಸೊಸೈಟಿ ಗಳನ್ನು ನೇಮಕ ಮಾಡುವ ಹಾಗಿಲ್ಲ.

ಶ್ರೀ ಪಿ. ಎಸ್. ಲಕ್ಷ್ಮೀ ಕಾಂತಪ್ಪ.—ತಾಲ್ಲೂಕು ತಹಸೀಲ್‌ದಾರರಿಗೆ, ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೇವೆಂದು ಹೇಳಿದಿರಿ. ಇದರಿಂದ ತಾಲ್ಲೂಕಿಗೆ 20-30 ಮೈಲಿ ದೂರವಿರತಕ್ಕಂಥ ಹಳ್ಳಿಯವರಿಗೆ ಸಿಮೆಂಟ್ ಸಿಗುವುದು ಬಹಳ ತೊಂದರೆಯಾಗುತ್ತಾ ಇದೆ. ತಹಸೀಲುದಾರರಿಗೆ ಅಧಿಕಾರ ಕೊಡುವ ಪದ್ಧತಿಯನ್ನು ಬದಲಾಯಿಸಿ, ತಾಲ್ಲೂಕು ಬೋರ್ಡ್ ಅಧ್ಯಕ್ಷರಿಗೆ ಅಧಿಕಾರ ಕೊಟ್ಟು, ಪರ್ಮಿಟ್ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ತಾಲ್ಲೂಕು ಬೋರ್ಡ್ ಅಧ್ಯಕ್ಷರೂ ಹಳ್ಳಿಗೆ ದೂರಪ್ರದೇಶದಲ್ಲಿರುತ್ತಾರೆ. ಸಿಮೆಂಟ್ ಮಾರತಕ್ಕಂಥಾದ್ದು ಸಾಮಾನ್ಯವಾಗಿ ಪಟ್ಟಣಗಳಲ್ಲಿ. ತಾಲ್ಲೂಕು ಸ್ಥಳಗಳಲ್ಲಿ ಸಿಮೆಂಟ್ ಕೊಂಡುಕೊಳ್ಳುವುದಕ್ಕೆ ತಾಲ್ಲೂಕಿಗೆ ಹೆಡ್‌ಕ್ವಾರ್ಟರಿಗೆ ಹೋಗಲೇಬೇಕು. ಅದಕ್ಕೆ ತೊಂದರೆಯಾಗ ಬಾರದೆಂದು ತಾಲ್ಲೂಕು ಅಥಾರಿಟಿಯನ್ನು ನೇಮಕ ಮಾಡಿದ್ದೇವೆ.

Sri N. O. SAMAJI.—(Marathi)

2.00 P.M.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—P.W.D. ಕೆಲಸಕ್ಕೆ ತೊಂದರೆಯಾಗುತ್ತಿಲ್ಲ ಎಂದು ಹೇಳಿದಿರಿ. ಅನೇಕ ಸಂದರ್ಭಗಳಲ್ಲಿ ಒಂದು ಜಿಲ್ಲೆಗೆ ಕೊಟ್ಟಂಥ ಸಿಮೆಂಟನ್ನು ಮಂತ್ರಿಗಳ ಪ್ರಭಾವಕ್ಕೋ ಅಥವಾ ಇನ್ಯಾರಾದರ ಪ್ರಭಾವಕ್ಕೋ ಒಳಗಾಗಿ ಬೇರೆ ಕಡೆಗೆ ತೆಗೆದುಕೊಂಡು ಹೋದದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೆ ? ಅಂತಹವರ ಮೇಲೆ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ? ಉದಾಹರಣೆಗೆ ತಿಪಟೂರಿನಿಂದ ಕೋಲಾರಕ್ಕೆ 2000 ಮೂಟೆ ಹೋಗಿವೆ, ಅದು ಆಫೀಸರ ಬರವಣಿಗೆ ಯಲ್ಲೇ ಬರೆದಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ತುಮಕೂರಿನಲ್ಲಿ ಕಾರ್ಖಾನೆ ಇದೆ, ಕೋಲಾರದಲ್ಲಿ ಕಾರ್ಖಾನೆ ಇಲ್ಲ. ಅಮ್ಮನಂದ್ರದ ಕಾರ್ಖಾನೆಯಿಂದ ತರಿಸಿಕೊಂಡಿರುತ್ತಾರೆ. ಆ ರೀತಿ ಹೋಗಿರಬಹುದು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ನಾನು ಹೇಳುವುದು ಅದಲ್ಲ. ತಿಪಟೂರಿಗೆ ಅಲಾಟ್ ಆದ ಕೋಟಾವನ್ನ ಕೋಲಾರದಿಂದ ತಿರುಪತಿಗೆ ತೆಗೆದುಕೊಂಡು ಹೋಗಿದ್ದಾರೆ. ಈ ರೀತಿ ಆಗುವುದರಿಂದ ತಿಪಟೂರಿನ ಕೆಲಸ ಕಾರ್ಯಗಳಿಗೆ ಧಕ್ಕೆಯಾಗುವುದಿಲ್ಲವೇ ? ಕಾನೂನು ಪ್ರಕಾರ ಈ ರೀತಿ ಸಾಗಾಣಿಕೆಗೆ ಅವಕಾಶವಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಿರುಪತಿಯಲ್ಲಿ ಭತ್ಸ ಕಟ್ಟುತ್ತಾ ಇದ್ದಾರೆ, ಅದಕ್ಕೇ ಅಲ್ಲಿ ಇಲ್ಲದೇ ಇದ್ದುದರಿಂದ ಬೇರೆಕಡೆಯಿಂದ ತರಿಸಿಕೊಂಡಿರಬಹುದು. ಆ ರೀತಿ adjust ಮಾಡಿಕೊಳ್ಳುತ್ತಾರೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಮಾನ್ಯ ಕೈಗಾರಿಕಾ ಮಂತ್ರಿಗಳು ಉತ್ತರ ಕೊಡಬೇಕು, ಸ್ವಾಮಿ.

ಶ್ರೀ ಕೆ. ಮಲ್ಲಪ್ಪ.—ಅವರು ತಮ್ಮ ತಮ್ಮಲ್ಲೇ adjust ಮಾಡಿಕೊಂಡಿರಬಹುದೇ ಏನಾ ತಿಪಟೂರಿನಿಂದ ಕೋಲಾರಕ್ಕೆ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಆರ್ಡರ್ ಮಾಡಿಲ್ಲ.

ಶ್ರೀ ಆರ್. ಎಚ್. ಲಕ್ಷ್ಮೀಪತಿ.—ಪಟ್ಟಣಗಳಲ್ಲಿ ಹೆಚ್ಚು ದುಡ್ಡು ಕೊಟ್ಟು ಕೊಂಡುಕೊಳ್ಳುವುದರಿಂದ ಹಳ್ಳಿಗಳವರಿಗೆ ತೊಂದರೆಯಾಗಿದೆ. ಹಳ್ಳಿಗಳವರು ಬಹಳ ಕಷ್ಟಪಟ್ಟು ಹಣ ಸಂಪಾದನೆ ಮಾಡುತ್ತಾರೆ. ಹೆಚ್ಚು ದುಡ್ಡು ಕೊಡುವುದಕ್ಕೆ ಸಾಧ್ಯವಿಲ್ಲವಾದ್ದರಿಂದ ನ್ಯಾಯವಾದ ಬೆಲೆಗೆ ಹಳ್ಳಿಯವರಿಗೆ ಸಿಕ್ಕುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಹಳ್ಳಿಯವರು, ಪಟ್ಟಣದವರು ಎಂದು ಕಾನೂನು ಪ್ರಕಾರ ಒಂದು ವ್ಯವಸ್ಥೆ ಮಾಡಲಿಕ್ಕೆ ಆಗುವುದಿಲ್ಲ. We cannot discriminate ಎಲ್ಲರಿಗೂ ಅನುಕೂಲವಾಗುವಂತೆ ಅವಶ್ಯಕತೆ ಇರುವಂಥವರಿಗೆ ಸಿಮೆಂಟ್ ವಿತರಣೆ ಮಾಡತಕ್ಕ ಏರ್ಪಾಡು ಮಾಡಿದೆ.

Sri D. PARAMESHWARAPPA.—Are you aware that the present allotment of Cement to each District is inadequate and as a result of which many of the P. W. D. works are suffering ?

Sri K. MALLAPPA.—I am aware that the present allotment to the State is inadequate, but I am not aware of the fact that P. W. D. works are suffering.

Sri V. S. PATIL.—With regard to the agency of distribution and permit system given to the Government officials, has it come to the notice of the Government or has Government ever tried to know that the two agencies,—*i.e.*, the agency and the person who issues the license, have joined hands to see that a bulk of this Cement goes to the Black-market ?

Sri K. MALLAPPA.—I have no information about it. It is not true that a bulk of the Cement is going to the Black-market and nobody has made a complaint to me.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಮಾರ್ಕ್ ಆಕ್ಕೆರಿಗೆ ಗ್ರಾಂಟ್ close ಆಗಿ progress ಕೊಡುವುದರಿಂದ, ಈ ರೀತಿ ತಿಪಟೂರಿನಿಂದ ತಿರುಪತಿಗೆ ಸಿಮೆಂಟ್ ಹೊರಟು ಹೋದರೆ ತಿಪಟೂರು ತಾಲ್ಲೂಕಿನ ರೈತರ ಸ್ಥಿತಿ ಗತಿ ಏನು ?

ಶ್ರೀ ಎಂ. ವಿ. ಕೃಷ್ಣಪ್ಪ.—ತಿಪಟೂರು, ಕೋಲಾರ ಎಲ್ಲಾ ಒಂದೇ ಸರ್ಕಲ್ಲು. ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ adjust ಮಾಡಿಕೊಳ್ಳುತ್ತಾರೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಗೋಡೌನ್‌ನಲ್ಲಿ ಇದ್ದದ್ದನ್ನು ಈ ರೀತಿ ಸಾಗಿಸಿದರೆ ತಿಪಟೂರಿನ ಗತಿ ಏನು ? ಮೈನರ್ ಇರಿಗೇಷನ್ ಕೆಲಸ ಹೇಗೆ ಆಗಬೇಕು ?

ಶ್ರೀ ಕೆ. ಮಲ್ಲಪ್ಪ.—ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿಗೆ ಇಷ್ಟು ಸಿಮೆಂಟು ಅಂತ ಬರುತ್ತದೆ. ಶೇಕಡ 40ರಷ್ಟು P. W. Dಗೆ ಕೊಡುತ್ತೇವೆ. ಯಾರ್ಯಾರ ಅವಶ್ಯಕತೆ ಎಷ್ಟೆಷ್ಟಿರುತ್ತದೆಯೋ ಅದನ್ನು ನೋಡಿಕೊಂಡು ಉಪಯೋಗಿನುತ್ತಾರೆ.

Mr. SPEAKER.—Question hour is over.

———